# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ :- 21/11/2020 ರಂದು ವಾರ್ಡ್‌-31ರ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿ**

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸಾರ್ವಜನಿಕರು :-**

1. ಶ್ರೀ. ಶ್ರೀ.ರವಿವಡ್ಡರ್, ನೋಡಲ್ ಅಧಿಕಾರಿ
2. ಶ್ರೀ. ಬಸವರಾಜು ವಾರ್ಡ್ ಅಭಿಯಂತರರು
3. ಶ್ರೀ. ವಿನಯ ಕಿರಿಯ ಆರೋಗ್ಯ ಪರೀವಿಕ್ಷಕರು
4. ಶ್ರೀ ಖಮರ್ ಪಾಷ, ಅನ್ವರ್ ಲೇಔಟ್
5. ಶ್ರೀ ರಾಘವೇಂದ್ರ, ಅಶೋಕ ನಗರ
6. ಶ್ರೀ ಶರೀಫ್, ಕರುಮಾರಿಯಮ್ಮ ನಗರ
7. ಶ್ರೀ ರವಿ ಶಂಕರ್, ಸೌಕಾರ್ ಲೇನ್
8. ಶ್ರೀ ಹಬೀಬ್, ಪಿ.&ಟಿ ಕಾಲೋನಿ
9. ಶ್ರೀ ಕಮಲ್, ಬಸವನಗರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಡಲ್ ಅಧಿಕಾರಿರವರು ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್‌-31 ರ ವಾರ್ಡ್ ಸಮಿತಿ ಸಭೆಯನ್ನು ತಮಿಳ್ ಸಂಘ ಸ್ಕೂಲ್‌ನಲ್ಲಿ ನಡೆಸಲಾಯಿತು. ನೋಡಲ್ ಅಧಿಕಾರಿಗಳು ವಾರ್ಡ್‌ನ ಸಾರ್ವಜನಿಕರ ಕುಂದು ಕೊರತೆಗಳನ್ನು ಸದಸ್ಯರು ಮತ್ತು ಅಧಿಕಾರಿಗಳ ಜೋತೆಯಲ್ಲಿ ಚರ್ಚಿಸಿದರು ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ಈ ಕೆಳಕಂಡತೆ ತಿಳಿಸಲಾಗಿರುತ್ತದೆ.

➢ **ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯ ಕರುಮಾರಿಯಮ್ಮ ನಗರ 1ನೇ ಕ್ರಾಸ್ ರಸ್ತೆ ಬದಿಯ ಮೋರಿಯನ್ನು ಡಿಸಿಲ್ಟ್ ಮಾಡಲು ವಾರ್ಡ್ ಇಂಜಿನಿಯರ್‌ರವರಿಗೆ ಸೂಚಿಸಿದರು.

2. ವಾರ್ಡ್ ವ್ಯಾಪ್ತಿಯ ಅಶೋಕನಗರ 1ನೇ ಮುಖ್ಯ ರಸ್ತೆಯಲ್ಲಿನ ಕಲ್ವರ್ಟ್ ಡಿಸಿಲ್ಟ್ ಮಾಡಲು ವಾರ್ಡ್ ಇಂಜಿನಿಯರ್‌ರವರಿಗೆ ಸೂಚಿಸಿದರು.

3. ವಾರ್ಡ್ ವ್ಯಾಪ್ತಿಯಲ್ಲಿನ ಶಾಂಪುರ ಮುಖ್ಯ ರಸ್ತೆ ಗುಂಡಿಗಳನ್ನು ಮುಚ್ಚಲು ಕೂಡಲೆ ಕ್ರಮ ವಹಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳಿಗೆ ಪರಿಹರಿಸುವಂತೆ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು**

➢ **ಘನತ್ಯಾಜ್ಯ ಇಲಾಖೆಗೆ ಸಂಬಂದಿಸಿರುವುದು**

1. ಕಿರಿಯ ಆರೋಗ್ಯ ಪರೀವಿಕ್ಷಕರುಇಂದಿನ ಸಭೆಯಲ್ಲಿ ಎದ್ದುನಿಂತು ಇಂದು 57–ಪೌರಕಾರ್ಮಿಕರು, 18–ಆಟೋ, 3–ಕಾಂಪ್ಯಾಕ್ಟರ್ ಹಾಜರಾಗಿವೆ ಎಂದು ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿನ ಸೌಕಾರ್ ಲೇನ್‌ನಲ್ಲಿ ಕಸ ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲ, ಕೂಡಲೆ ಈ ಸಮಸ್ಯೆ ಪರಿಹರಿಸಲು ಕಿರಿಯ ಆರೋಗ್ಯ ಪರೀವಿಕ್ಷಕರಿಗೆ ಸೂಚಿಸಿದರು.
3. ವಾರ್ಡ್ ವ್ಯಾಪ್ತಿಯ ಅನಧಿಕೃತವಾಗಿ ಬೇಕರಿಗಳಲ್ಲಿ ಸಿಗರೇಟ್‌ಗಳನ್ನು ಮಾರಾಟ ಮಾಡುವುದನ್ನು ಕಂಡುಬಂದಿದ್ದು ಕೂಡಲೆ ಕ್ರಮವಹಿಸಲು ಸೂಚಿಸಿದರು.

**ಕ್ರಮ ಕಿರಿಯ ಆರೋಗ್ಯ ಪರೀವಿಕ್ಷಕರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಕೂಡಲೆ ಕ್ರಮ ವಹಿಸಲು ಸೂಚಿಸಿದರು.**

➢ **ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿನ ನೀರಿನ ಸಮಸ್ಯೆಗಳನ್ನು ಕೂಡಲೆ ಪರಿಹರಿಸಬೇಕಾಗಿ ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಮನೆಗೆ ವಾಟರ್ ಮೀಟರ್ ಹೆಚ್ಚಿನ ಸಂಖ್ಯೆಯಲ್ಲಿ ಹಾಕಿಸಿಕೋಳ್ಳಲು ಸಾರ್ವಜನಿಕರಿಗೆ ಅರಿವು ಮೂಡಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳನ್ನು ಪರಿಹರಿಸುವಂತೆ ಸಹಾಯಕ ಅಭಿಯಂತರರಿಗೆ ಈ ಸಭೆ ಮುಖಾಂತರ ಸೂಚಿಸಲಾಯಿತು.**

➢ **ಅರಣ್ಯ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯ ಮರಗಳಲ್ಲಿ ನಿರ್ಜೀವವಾದ ರೆಂಬೆ ಕೊಂಬೆಗಳಿದ್ದು ಇವುಗಳನ್ನು ಕೂಡಲೆ ತೇರುವುಗೋಳಿಸಲು ಸೂಚಿಸಿದರು.

ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗೆ ಪರಿಹರಿಸುವಂತೆ ಅರಣ್ಯಾಧಿಕಾರಿಗಳಿಗೆ ಈ ಸಭೆ ಮುಂಖಾಂತರ ಸೂಚಿಸಲಾಯಿತು.

➢ <u>ಪಶು ಪಾಲನೆ ಇಲಾಖೆಗೆ ಸಂಬಂಧಿಸಿರುವುದು</u>

1. ವಾರ್ಡ್ ವ್ಯಾಪ್ತಿಯ ಬೀದಿನಾಯಿಗಳ ಸಮಸ್ಯೆ ಹೆಚ್ಚಾಗಿದ್ದು ಕೂಡಲೆ ಪರೀಹರಿಸಲು ಸೂಚಿಸಿದರು.

ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗೆ ಪರಿಹರಿಸುವಂತೆ ಪಶು ಪಾಲನೆ ಸಹಾಯಕ ನಿರ್ದೇಶಕರು (ಪೂರ್ವ) ರವರಿಗೆ ಈ ಸಭೆ ಮುಂಖಾಂತರ ಸೂಚಿಸಲಾಯಿತು.

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

ಸದಸ್ಯ ಕಾರ್ಯದರ್ಶಿ ವಾರ್ಡ್ -31

ನೋಡಲ್ ಅಧಿಕಾರಿ ವಾರ್ಡ್ -31

21/5/2020

<u>ಪ್ರತಿಗಳನ್ನು:</u>

1. ಮಾನ್ಯ ಆಡಳಿತಾಧಿಕಾರಿರವರ ಅಪ್ತ ಶಾಖೆಗೆ ಸಲ್ಲಿಸಿ ಆಡಳಿತಾಧಿಕಾರಿರವರ ಗಮನಕ್ಕೆ ತರಲು ಕೊರಿದೆ.
2. ಮಾನ್ಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೊರಿದೆ
3. ಮಾನ್ಯ ವಲಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೊರಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಅಪ್ತಶಾಖೆಗೆ ಸಲ್ಲಿಸಿ ಅಯುಕ್ತರವರ ಗಮನಕ್ಕೆ ತರಲು ಕೊರಿದೆ.
5. ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಹಿರಿಯ ವೈಧ್ಯಾಧಿಕಾರಿಗಳು (ಪುಲಿಕೇಶಿನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ
13. ಸಹಾಯಕ ನಿರ್ದೇಶಕರು (ಪೂರ್ವ) ಪಶು ಪಾಲನೆ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
14. ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
15. ಕಛೇರಿ ಪ್ರತಿ.